ಶರಣಪ್ಪ ಕಾಕಾ ಹಾದೀಲೆ ಸಿಕ್ರ. ಅದೇನು ಮಾತದು ನಂಗ ತಿಳೀಬೇಕಾಗ್ಯದ' ಮಗಳ ಪ್ರಶ್ನೆ ನಿಂತ ನಿಟ್ಟಿನಲ್ಲೆ ಎದುರು ಬಿತ್ತು. ಇದನ್ನ ಸದ್ಯದಲ್ಲೆ ಎದುರಿಸಲೆಬೇಕಿತ್ತು. ಎರಡುಮೂರು ಬಾರಿ ಪ್ರಯತ್ನಿಸಿ ಕೊನೇ ಕ್ಷಣದಲ್ಲಿ ಭಯ ಶಬ್ದವನ್ನು ಕಸಿದಿತ್ತು. ಈಗ ಅದು ಎದುರೆ ಇತ್ತು. 'ಮತ್ತ... ಅದೂ... ಏನಂದ್ರ ಪದುಮಾ, ಶರಣಪ್ಪ ಕಾಕಾ ಒಂದು ಸಂಬಂಧ ತಂದಾರ' ಬೆರಗಿನಿಂದ ತಾಯಿಯ ಕಣ್ಣಲ್ಲಿ ನೋಡಿದಳು. 'ನೀನು ಒಪಗಿ ಕೊಟ್ಟೀಯನು?' ತಡವರಿಸಿದಳು ಕಾಶವ್ವ '...ಅದೂ... ಮತ್ತ... ವಳ್ಳೇ ಸಂಬಂಧ ಅಂದ್ರವ್ವ. ನಿಂಗೂ ಮದವಿ ಅಂತ ಆಗಬ್ಯಾಡನು? ಅವ್ರನ್ನ ಹ್ಯಾಂಗ ಬ್ಯಾಸರ ಪಡಿಸ್ಲಿ.. ನಮಗರಾ ಹೇಳಕೇಳಾವರು ಮತ್ಯಾರದಾರು ಹೇಳು?' ಅವ್ವ ಸಹಜವಾಗಿಲ್ಲ ಅಂತ ಎರಡು ದಿನದಿಂದ ಅನಿಸುತ್ತಿದ್ದುದು ನೆನಪಾಯಿತು ಪದ್ಮಾವತಿಗೆ. 'ನನ್ನೊಂದು ಮಾತು ಕೇಳಬೇಕು ಅನಿಸ್ಲಿಲ್ಲ ನಿಮಗ? ನಾನೀಗ ಬ್ಯಾಡ ಅಂತ ಅಂದ್ರ?' ಮಗಳ ಸವಾಲಿಗೆ ಕುಸಿದುಹೋದ ಕಾಶವ್ವ, 'ನೋಡು ಪದಮಾ, ನೀನೀಗ ಇಲ್ಲೆ ಕೂಡು. ಮಾತಾಡಣಂತ' ಅನ್ನುತ್ತ ಕೆಳಗೆ ಕೂತು ಮಣ್ಣಿನ ಗೋಡೆಗೆ ದೈನಾಸಾಗಿ ಆತುಕೊಂಡಳು. ಎದುರು ಕೂತು ತನ್ನ ಉತ್ತರಕ್ಕೆ ಕಾಯುತ್ತಿರುವ ಮಗಳ ಆಕಾರ ಕಣ್ಣಲ್ಲಿ ಮಡುಗಟ್ಟುವ ನೀರಲ್ಲಿ ಮಸುಕಾಗತೊಡಗಿತು.

ಮೂರು ಹೆಣ್ಣುಮಕ್ಕಳ ತಾಯಿ ತಾನು. ಮನೆ ಯಜಮಾನ ಇಲ್ಲ. ಅಲ್ಪಸ್ವಲ್ಪ ಆದಾಯ ತರುವ ಹೊಲ ಕೈ ಬಿಡತು. ಖಾನಾವಳಿ ಕೆಲಸ, ಕೂಲಿ ಅಂತ ಜೀವನ ಸಾಗುತ್ತಿತ್ತು. ದೊಡ್ಡಮಗಳು ಆಸರೆಯಾಗಿ ನಿಂತು ಗಳಿಸತೊಡಗಿದಾಗ ಸ್ವಲ್ಪ ಧೈರ್ಯ ಬಂದಿತ್ತು. ಎರಡನೆಯವಳೂ ಸದ್ಯ ಗಳಿಕೆ ಸುರುಮಾಡುವ

